ಖಂಡಿತಾ ಅದರ ಬಾಯಲ್ಲಿ ಮೀನೋ, ಕಪ್ಪೆ ಮರಿಯೋ, ಸೀಗಡಿಯೋ ಇಲ್ಲ ಹಾವು ರಾಣಿಯೋ ಇದ್ದೇ ಇರುತ್ತದೆ ಎಂಬ ನಂಬಿಕೆ ಇದೆ. ತನ್ನ ಮರಿಗಳಿಗೆ ನಿರಂತರವಾಗಿ ಆಹಾರ ಹಕ್ಕಿ ತರುವ ಈ ಮಿಂಚುಳ್ಳಿಯ ಬಣ್ಣವೂ ಅಷ್ಟೇ ಮನಮೋಹಕ. ಇಷ್ಟು ಸುಂದರ ಪುಟಾಣಿ ಹಕ್ಕಿಯನ್ನು ನಾನಂತೂ ಇನ್ನೂ ಕಂಡಿಲ್ಲ.



ಮಣ್ಣಿನ ದಿಬ್ಬವೊಂದಲ್ಲಿ ಕೊರೆದ ಬಿಲದಲ್ಲಿ ಮೂರರಿಂದ ನಾಲ್ಕು ಮರಿಗಳು ಕೂಗುವ ಸಣ್ಣ ದನಿಯೂ ಕೇಳುತ್ತಿದೆ. ಒಂದು ದಿನದಲ್ಲಿ ಹಕ್ಕಿ ಆರರಿಂದ ಎಂಟು ಸಲ ಬಂದು ಊಟ ಉಣಿಸಿ ಹೋಗುವ ಅಂದಾಜಿದೆ. ಈ ಸಮಯದಲ್ಲಿ ಹಕ್ಕಿಗಳ ಏಕಾಗ್ರತೆ ಮತ್ತು ಸೂಕ್ಷ್ಮತೆ ಪ್ರಬಲವಾಗಿರುತ್ತದೆ. ಗೂಡಿಗೆ ಹೋಗುವ ಮೊದಲು ಹಕ್ಕಿ ಕಡ್ಡಿ ಮೇಲೆ ಬಂದು ಕೂತು, ಅತ್ತಿತ್ತ ನೋಡಿ ಒಂದು ಸಣ್ಣ ಶಬ್ದ ಮಾಡಿಯೇ ಗೂಡೊಳಗೆ ನುಸುಳುತ್ತದೆ. ಹೆಣ್ಣು, ಗಂಡು ಹಕ್ಕಿಗಳೆರಡೂ ಸಮಾನವಾಗಿ ಸರದಿಯ ಪ್ರಕಾರ ಆಹಾರ ತರುತ್ತವೆ. ಇದೇ ನಮಗಿರುವ ಚಾನ್ಸು. ಬೇರೆ ಸಮಯದಲ್ಲಿ ಈ ಮಿಂಚುಳ್ಳಿಯನ್ನು ಕಾಡಲ್ಲಿ ಹುಡುಕುವುದು ಅಷ್ಟು ಸಲೀಸಲ್ಲ. ಇವುಗಳ ಬಾಣಂತನದ ನೆಲೆ ಸಿಕ್ಕಿಬಿಟ್ಟರೆ ನಮಗದೇ ಬಂಪರ್ ಲಾಟ್ರಿ. ಇವುಗಳ ಫಜೀತಿಯ ಮತ್ತು ಸಂಕಷ್ಟದ ಈ ಸಮಯವೇ ನಮಗೆ ಸಿಗಲಿರುವ ಸದವಕಾಶ. ಪಕ್ಷಿಗಳ ಈ ದುಃಸ್ಥಿತಿಯ ಫಾಯಿದೆಯನ್ನು ನಾವು ಬಳಸಿಕೊಳ್ಳುತ್ತಿದ್ದೇವೆ ಎಂದು ಒಮ್ಮೊಮ್ಮೆ ಮನಸ್ಸಿಗೆ ಖೇದವೂ ಆಗುತ್ತದೆ. ಬಾಣಂತನದ ಸಮಯದಲ್ಲಿ ಹಕ್ಕಿಗಳ ರೆಕ್ಕೆಗಳ ಬಣ್ಣ ಹೆಚ್ಚು ತೀಕ್ಷ್ಣವಾಗಿ ಸುಂದರವೂ ಆಗಿ ಬದಲಾಗಿರುತ್ತದೆ. ತಿಂದುಂಡು ಹೆಚ್ಚು ಚಟುವಟಿಕೆಯಿಂದ ಹಾರಾಡುವ ಇವುಗಳ ಫ್ಲೈಟ್ ಶಾಟ್ ಸಿಗುವುದು. ಈ ವಿಷಯದಲ್ಲಿ ಪಟಗಾರರು ಸ್ವಾರ್ಥಿಗಳು.

ಬಾಣಂತನದ ಸಮಯದಲ್ಲಿ ಹೆಣ್ಣುಹಕ್ಕಿ ಹೆಚ್ಚು ಅಂಜಿಕೆ ವ್ಯಕ್ತಪಡಿಸುವುದು. ಇದು ಯಾಕೆ ಹೀಗೆ ಹೆದರುತ್ತದೆ ಎಂಬುದು ಗೊತ್ತಿಲ್ಲ. ಎಷ್ಟೋ ಸಲ ಹೆಣ್ಣು ಹಕ್ಕಿ ಕಡ್ಡಿಯ ಮೇಲೆ ಬಂದು ಕೂರುವುದೇ ಇಲ್ಲ. ನೇರವಾಗಿ ಹಾರಿ ಗೂಡೊಳಗೆ ತೂರಿ ಹೋಗಿ ಮರಿಗಳಿಗೆ ಗುಕ್ಕು ತಿನಿಸಿ ಪರಾರಿಯಾಗುತ್ತದೆ. ಗಂಡು ಹಕ್ಕಿ ಕೊಂಚ ಧೈರ್ಯವಂತ. ಪ್ರಕೃತಿ ಈ ವ್ಯತ್ಯಾಸವನ್ನು ಕೊಟ್ಟಿರುವುದರ ಹಿಂದೆ ಯಾವುದಾದರೂ ಬಲವಾದ ಕಾರಣಗಳಿರಬೇಕು! ಶಿಕಾರಿಗೊಂಡ ಜೀವಿಗಳು ಅಕಸ್ಮಾತ್ ಪ್ರಾಣ ಬಾಕಿ ಉಳಿಕೊಂಡಿದ್ದರೆ ಮತ್ತಷ್ಟು ಕುಕ್ಕಿ, ಜಜ್ಜಿ, ಹದ ಮಾಡಿದ ನಂತರವೇ ಹಕ್ಕಿಗಳು ತಮ್ಮ ಮರಿಗಳಿಗೆ ತಿನ್ನುವ ಗುಟುಕು ಕೊಡುತ್ತವೆ. ಈ ನಿಗೇಬಾನಿಯನ್ನು ಸಾಧಾರಣವಾಗಿ ಎಲ್ಲಾ ಹಕ್ಕಿಗಳನ್ನೂ ನಿಭಾಯಿಸುತ್ತವೆ.

ಈ ಸಲ ನಮ್ಮೆಲ್ಲರ ದುಸ್ಸಾಹಸವನ್ನು ಚಿತ್ರೀಕರಿಸಿ ಯೂಟ್ಯೂಬಿನಲ್ಲಿ ಬಿತ್ತರಿಸುವ ನಶೆ ಹೊತ್ತು ಬಂದಿದ್ದ ಮೈಸೂರಿನ ಧರ್ಮರಾಜ್ ಕೂಡ ನಮ್ಮ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ನಮಗಿಂತ ಹೆಚ್ಚಾಗಿ ಮಳೆಯಲ್ಲಿ ನೆಂದು ಗುಬ್ಬಚ್ಚಿಯಾಗಿದ್ದಾರೆ. ಈ ಹಾಳು ಮಳೆ ಬಿಡುತ್ತಲೇ ಇಲ್ಲ. ಸೇಡು ತೀರಿಸಿಕೊಳ್ಳುತ್ತಿದೆ. ಮಿಂಚುಳ್ಳಿಗಳ ಮರಿಗಾಲ ಇಂತಹ ಉಧೋ ಎಂಬ ಮಳೆಗಾಲಿಯಲ್ಲೇ ನಡೆಯುವುದು. ಹೀಗಾಗಿ ಏನೂ ಮಾಡುವಂತಿಲ್ಲ. ನಮ್ಮ ಮಾಯಾವಿ ಪಕ್ಷಿ ನೋಡುತ್ತೇನೆಂದು ಕಾದು ಕೂತಿದ್ದು ಸುಸ್ತಾದ ಅವರು ವಿಡಿಯೋ ಕ್ಯಾಮೆರಾ ಹಿಡಿದು ಸ್ಥಳಿಯ ನ್ಯಾಚುರಲಿಸ್ಟ್ ಪ್ರವೀಣನ ಜೊತೆ ಕಾಡು ಸುತ್ತಲು ಹೊರಟು ಹೋದರು.

ನಾವು ಕೂತಿದ್ದ ಜಾಗದ ಪಕ್ಕದಲ್ಲಿ ಹೊಳೆ ರಭಸವಾಗಿ ಹರಿಯುತ್ತಲೇ ಇತ್ತು. ತಾತ್ಕಾಲಿಕ ಶೆಡ್